# ಬಂಗಾರದ ಮಾವು

**ಚಂಚಲ ವೇಣು**

ಕಲೆ: ಗಣೇಶ ಆಚಾರ್ಯ

ಸಿಂಗಾರ ತಂದೆ ತಾಯಿಗೆ ಒಬ್ಬನೇ ಮಗ. ತಾಯಿ ಅವನು ಚಿಕ್ಕವನಿದ್ದಾಗಲೇ ತೀರಿಕೊಂಡಿದ್ದಳು. ತಂದೆ ತಮಗಿದ್ದ ತುಂಡು ಭೂಮಿಯಲ್ಲಿ ಸಣ್ಣ ಮಾವಿನ ತೋಟ ಮಾಡಿ, ಮಾವು ಬೆಳೆದು, ಮಾರಿ, ಬರುವ ದುಡ್ಡಿನಿಂದ ಸಂಸಾರ ಸಾಗಿಸುತ್ತಿದ್ದ. ತಂದೆಯೇ ಮನೆ ಹಾಗೂ ತೋಟ ಎಲ್ಲವನ್ನೂ ಸಂಭಾಳಿಸುತ್ತಿದ್ದ. ಸಿಂಗಾರ ಸರಿಯಾಗಿ ವಿದ್ಯೆಯನ್ನೂ ಕಲಿಯದೆ ತೋಟದ ಕೆಲಸವನ್ನೂ ಮಾಡದೆ ಹಾಗೇ ತಿರುಗಾಡಿಕೊಂಡಿದ್ದ. ತಂದೆ ಎಷ್ಟು ಬುದ್ಧಿ ಹೇಳಿದರೂ ಅವನಿಗೆ ನಾಟುತ್ತಿರಲಿಲ್ಲ.

ಸಿಂಗಾರ ವಯಸ್ಸಿಗೆ ಬರುತ್ತಿದ್ದಂತೆ ತಂದೆ ಅವನಿಗೊಂದು ಹುಡುಗಿಯನ್ನು ಹುಡುಕಿ ಮದುವೆ ಮಾಡಿದ. ಮದುವೆಯಾದ ಮೇಲೆ ಮಗನಿಗೆ ಜವಾಬ್ದಾರಿ ಬರುತ್ತದೆ ಎಂದು ನಂಬಿದ್ದ. ಆದರೆ, ಸಿಂಗಾರನ ಜೀವನದಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ. ಹಿಂದಿನಂತೆಯೇ ತಿಂದುಂಡು ಸೋಮಾರಿಯಾಗಿ ಕಾಲ ಕಳೆಯುತ್ತಿದ್ದ. ತಂದೆಗೆ ವಯಸ್ಸಾಗುತ್ತಿದ್ದಂತೆ, ಮಗನದೇ ಯೋಚನೆಯಾಯಿತು. ಕೊನೆಗೊಂದು ದಿನ ತಂದೆ ಅನಾರೋಗ್ಯದಿಂದ ಹಾಸಿಗೆ ಹಿಡಿದ. ಅವರ ತೋಟ ಎಲ್ಲಾ ಪಾಳು ಬಿದ್ದಿತು. ಮಗ ತೋಟದ ಕಡೆ ಗಮನ ಹರಿಸದೆ ಇರುವುದು ಕಂಡು ಕೊರಗಿದ ತಂದೆ, ಸಾಯುವ ಮುನ್ನ ಮಗ–ಸೊಸೆಯನ್ನು ಹತ್ತಿರ ಕರೆದು, 'ನೋಡಿ, ಈ ಬಾರಿ ನಮ್ಮ ಮಾವಿನ ತೋಟದಲ್ಲಿ ಒಂದು ಒಂದು ಚಮತ್ಕಾರ ನಡೆಯಲಿದೆ. ತೋಟದ ಯಾವುದೊ ಒಂದು ಮಾವಿನ ಮರದಲ್ಲಿ ಒಂದು ಬಂಗಾರದ ಮಾವು ಬಿಡುತ್ತದೆ. ಹತ್ತು ವರ್ಷದ ಹಿಂದೆ ನಮ್ಮೂರಿಗೆ ಬಂದಿದ್ದ ಮಹಾ ತಪಸ್ವಿಗಳು ನನಗೊಂದಷ್ಟು ಬೀಜಗಳನ್ನು ಕೊಟ್ಟು ಇದನ್ನು ನಿನ್ನ ಭೂಮಿಯಲ್ಲಿ ಬಿತ್ತು, ಹತ್ತು ವರ್ಷಗಳ ನಂತರ ಯಾವುದೋ ಒಂದು ಮರದಲ್ಲಿ ಪ್ರತಿ ವರ್ಷಕ್ಕೆ ಒಂದರಂತೆ ಒಂದು ಬಂಗಾರದ ಮಾವಿನ ಹಣ್ಣು ಸಿಗುತ್ತದೆ ಎಂದಿದ್ದರು. ಈಗ ಆ ಅವಧಿ ಬಂದಿದೆ. ಈ ವರ್ಷದಿಂದ ಅದು ಬಂಗಾರದ ಫಲ ನೀಡುತ್ತದೆ' ಎಂದು ಹೇಳಿದ.

ಸಿಂಗಾರ ಸಂತೋಷದಿಂದ, 'ಇಂದೇ ಹೋಗಿ ನೋಡುತ್ತೇನೆ' ಎಂದ. 'ಇಲ್ಲ, ಅದು ಒಂದೇ ದಿನದಲ್ಲಿ ಸಿಗುವುದಿಲ್ಲ. ಮೊದಲು ತೋಟದಲ್ಲಿರುವ ಎಲ್ಲಾ ಮಾವಿನ ಮರಗಳನ್ನು ಸರಿಯಾಗಿ ನೀರು ಗೊಬ್ಬರ ಹಾಕಿ ಆರೈಕೆ ಮಾಡಬೇಕು. ಕಾಯಿಲೆ ಬರದಂತೆ, ಹುಳ ಹಿಡಿಯದಂತೆ ಔಷಧಿ ಸಿಂಪಡಿಸಬೇಕು. ಹಾಗೆ ಮಾಡಿದಾಗ ಎಲ್ಲಾ ಮರಗಳು ಸೊಂಪಾಗಿ ಬೆಳೆಯುತ್ತವೆ. ಆಗ ಯಾವುದೋ ಒಂದು ಮರದಲ್ಲಿ ಆ ಫಲ ಸಿಗುತ್ತದೆ. ಅದು ಯಾವುದೆಂದು ಮೊದಲೇ ಗೊತ್ತಾಗದು. ನೀನು ಎಲ್ಲಾ ಗಿಡಗಳನ್ನು ಆರೈಕೆ ಮಾಡಲೇಬೇಕು' ಎಂದು ವಿವರಿಸಿದ.

ಸಿಂಗಾರ, 'ಆಯಿತಪ್ಪಾ, ನಾಳೆಯಿಂದಲೇ ಎಲ್ಲ ಗಿಡಗಳ ಆರೈಕೆ ಮಾಡುತ್ತೇನೆ. ಯಾವುದಾದರೂ ಒಂದು ಮರದಲ್ಲಿ ಬಂಗಾರದ ಫಲ ಬಿಡಲೇಬೇಕಲ್ಲವೆ?' ಎಂದು ಉತ್ಸಾಹ ತೋರಿದ. ತಂದೆ ನೆಮ್ಮದಿಯಿಂದ ಪ್ರಾಣಬಿಟ್ಟ. ಮರುದಿನದಿಂದ ಸಿಂಗಾರ ಹಾಗೂ ಅವನ ಹೆಂಡತಿ ತೋಟಕ್ಕೆ ಹೋಗಿ ಮಾವಿನ ತೋಟವನ್ನು ನೋಡಿಕೊಳ್ಳಲು ತೊಡಗಿದರು. ಪಾಳು ಬಿದ್ದ ತೋಟವನ್ನು ಸ್ವಚ್ಛಗೊಳಿಸಿ,